ಉದಯವಾಣಿ

# ಜೈನ್ ವಿವಿಗೆ 'ಎ' ಗ್ರೇಡ್

ಬೆಂಗಳೂರು: ಜೈನ್ ವಿಶ್ವವಿದ್ಯಾಲಯಕ್ಕೆ ಯುಜಿಸಿಯ ಸ್ವಾಯತ್ತ ಸಂಸ್ಥೆ 'ನ್ಯಾಕ್' (ನ್ಯಾಷನಲ್ ಅಸೆಸ್‌ಮೆಂಟ್ ಆ್ಯಂಡ್ ಅಕ್ರೆಡಿಟೇಷನ್ ಕೌನ್ಸಿಲ್)ನಿಂದ 'ಎ' ಗ್ರೇಡ್ ಮಾನ್ಯತೆ ದೊರಕಿದೆ. ಈಚೆಗೆ ವಿವಿಗೆ ಭೇಟಿ ನೀಡಿದ ನ್ಯಾಕ್ ಪ್ರತಿನಿಧಿಗಳ ತಂಡವು, ಬೋಧನೆ, ಕಲಿಕೆ, ಮೌಲ್ಯಮಾಪನ, ವಿದ್ಯಾರ್ಥಿಗಳ ಪ್ರಗತಿ, ಆಡಳಿತ, ನಾಯಕತ್ವ, ನಿರ್ವಹಣೆ ಮತ್ತಿತರ ಅಂಶಗಳ ಕುರಿತು ಪರಿಶೀಲನೆ ನಡೆಸಿತು. ವಿವಿಗೆ 4 ಅಂಶಗಳಲ್ಲಿ 3.31 ಸಿಜಿಪಿಎ ನೀಡಿದೆ. ಇದು ವಿಶ್ವವಿದ್ಯಾಲಯಕ್ಕೆ ಪ್ರಮುಖ ಮೈಲುಗಲ್ಲು ಎಂದು ಕುಲಪತಿ ಡಾ.ಎನ್. ಸುಂದರರಾಜನ್ ತಿಳಿಸಿದ್ದಾರೆ. ವಿವಿಯು ಆರಂಭವಾದ ದಿನದಿಂದಲೂ ಅತ್ಯುತ್ತಮ ಮತ್ತು ಸೃಜನಶೀಲ ಕಾರ್ಯದಲ್ಲಿ ತೊಡಗಿರುವುದಕ್ಕೆ 'ಎ' ಗ್ರೇಡ್ ಮಾನ್ಯತೆ ಉತ್ತಮ ಪುರಾವೆಯಾಗಿದೆ. ಮುಂದಿನ ದಿನಗಳಲ್ಲಿ ಈ ಮಾನ್ಯತೆಯನ್ನು ಉಳಿಸಿಕೊಂಡು ಹೋಗುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.